ಕೂಡ ಅನ್ವಯಿಸುತ್ತದೆ. ಇನ್ನು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂಬುದನ್ನೂ ಸಹ ಮಾನ್ಯ ಸದಸ್ಯರು ಹೇಳಿದ್ದಾರೆ. ಆ ಬಗ್ಗೆ ತನಿಖೆ ನಡೆಯುತ್ತಿದ್ದು ಬೆಳೆ ಹಾನಿಯಿಂದಲೇ ಆತ್ಮಹತ್ಯೆಗಳಾಗಿವೆ ಎಂಬುದು ತನಿಖೆಯಿಂದ ಸ್ಪಷ್ಟವಾದರೆ ಆತ್ಮಹತ್ಯೆ ಮಾಡಿಕೊಂಡವರ ಕುಟುಂಬದವರಿಗೆ ಒಂದು ಲಕ್ಷ ರೂಪಾಯಿಗಳ ಪರಿಹಾರ ಧನವನ್ನು ಕೊಡಲಾಗುವುದು; ಎಂಬುದನ್ನೂ ಕೂಡ ಈಗಾಗಲೇ ತಿಳಿಸಲಾಗಿದೆ. ಅದೇ ರೀತಿ ಅವರ ತಾಲ್ಲೂಕಿನಲ್ಲಿಯೂ ಬೆಳೆ ಹಾನಿಯಿಂದ ಆತ್ಮಹತ್ಯೆಗಳಾಗಿರುವುದು ನಿಜವಾಗಿದ್ದಲ್ಲಿ ಅದಕ್ಕೆ ಸರ್ಕಾರ ಯಾವ ರೀತಿ ಕ್ರಮ ತೆಗೆದುಕೊಳ್ಳುತ್ತದೆ ಎಂಬುದನ್ನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಲಿಚ್ಚಿಸುತ್ತೇನೆ.

(ಎ) <u>ಶಿಗ್ಗಾಂವ್ ತಾಲ್ಲೂಕಿನಲ್ಲಿ ಸಹಕಾರ ಸಂಘಗಳ ಮುಖಾಂತರ ನೀಡಿರುವ ಸಾಮೂಹಿಕ ನೀರಾವರಿ ಯೋಜನೆಗಳ ಸಾಲ ಮರು ಪಾವತಿ</u>

ಶ್ರೀ ಮಂಜುನಾಥ ಸಿ. ಕುನ್ನೂರ್(ಶಿಗ್ಗಾಂವ್) :- ಶಿಗ್ಗಾಂವ್ ತಾಲ್ಲೂಕಿನ ಕಂಕಣವಾಡ, ಚಿಕ್ಕಮಲ್ಲೂರ, ಹಿರಿಮಲ್ಲೂರ ಗ್ರಾಮಗಳಲ್ಲಿ 1997-98ನೇ ಸಾಲಿನಲ್ಲಿ ಸಹಕಾರ ಸಂಘಗಳ ಮುಖಾಂತರ ಸಾಮೂಹಿಕ ನೀರಾವರಿ ಯೋಜನೆಗಾಗಿ ರೈತರು ಸಾಲ ಪಡೆದಿದ್ದು ಆ ಸಾಲವನ್ನು ದಿನಾಂಕ 24.3.98 ರೊಳಗಾಗಿ ಮರುಪಾವತಿ ಮಾಡಬೇಕೆಂದು ಸರ್ಕಾರ ಆದೇಶ ನೀಡಿದೆ. ರೈತರಿಗೆ ಈ ಬಗ್ಗೆ ನೋಟೀಸ್‌ಗಳನ್ನೂ ಕೂಡ ಜಾರಿ ಮಾಡಲಾಗಿದೆ. ಸಾಮೂಹಿಕ ನೀರಾವರಿ ಯೋಜನೆಯಲ್ಲಿ ಸುಮಾರು 3 ಲಕ್ಷ 27 ಸಾವಿರ ರೂಪಾಯಿಗಳ ಸಾಲವನ್ನು ಪಡೆಯಲಾಗಿದ್ದು ಅದಕ್ಕೆ ಕೇಂದ್ರ ಸರ್ಕಾರದ ಯೋಜನೆಯಡಿಯಲ್ಲಿ ಒಂದು ಲಕ್ಷ ರೂಪಾಯಿ ಸಹಾಯ ಧನವನ್ನು ಕೊಟ್ಟಿದ್ದಾರೆ. 1985ರಿಂದ ಈ ಸಹಕಾರ ಸಂಘದಲ್ಲಿದ್ದಂತಹ ರೈತರು ಸಣ್ಣ ಮತ್ತು ಅತಿಸಣ್ಣ ಹಾಗೂ ಬಡ ರೈತರಾಗಿದ್ದಾರೆ. ಈ ವರ್ಷ ಸಕಾಲದಲ್ಲಿ ಮಳೆ ಬೀಳದಿದ್ದರಿಂದ ಅವರು ಬಹಳಷ್ಟು ತೊಂದರೆಗೆ ಒಳಗಾಗಿದ್ದಾರೆ. ನಿಗಧಿಪಡಿಸಿದ ಅವಧಿಯೊಳಗೆ ಸಾಲ ಮರುಪಾವತಿ ಮಾಡದಿದ್ದಲ್ಲಿ ಸರ್ಕಾರ ಅವರ ಜಂಗಮ ಆಸ್ತಿ ಪಾಸ್ತಿಗಳನ್ನು ಜಪ್ತಿ ಮಾಡುವುದಾಗಿ ಆದೇಶ ಹೊರಡಿಸಿರುವುದರಿಂದ ರೈತರಿಗೆ ಬಹಳ ತೊಂದರೆಯಾಗಿದೆ. ಈಗಾಗಲೇ ಧಾರವಾಡ ಜಿಲ್ಲಾ ಪಂಚಾಯಿತಿಯಲ್ಲಿ ತರೂರು ಗ್ರಾಮದ ಇಂಥದ್ದೇ ಒಂದು ಸಹಕಾರ ಸಂಘಕ್ಕೆ ಒಂದು ಹಂತದಲ್ಲಿ ಕೆಲವು ರಿಯಾಯಿತಿಗಳನ್ನು ಕೊಟ್ಟಿದ್ದಾರೆ. ಅದೇ ರೀತಿ ಇಲ್ಲಿನ ರೈತರಿಗೂ ರಿಯಾಯಿತಿ ಕೊಡುವುದಕ್ಕೆ ತಾವು ವ್ಯವಸ್ಥೆ ಮಾಡಬೇಕು. ಇಲ್ಲವಾದರೆ ಸದ್ಯಕ್ಕೆ ಆ ಸಾಲವನ್ನು ವಸೂಲಿ ಮಾಡದಂತೆ ಸೂಕ್ತ ಆದೇಶ ಹೊರಡಿಸಿ ರೈತರಿಗೆ ಸಾಲ ಮರುಪಾವತಿಗೆ ಸಮಯಾನುಕಾಶ ಕೊಡಬೇಕು ಎಂದು ತಮ್ಮ ಮುಖಾಂತರ ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಸಭಾಧ್ಯಕ್ಷರೆ, ಯಾರು ಸಾಲ ಪಡೆದುಕೊಂಡಿದ್ದಾರೆ ಅವರು ಸಾಲ ತೀರಿಸಬೇಕಾಗುತ್ತದೆ. ಆದುದರಿಂದ ಅವರು ನೋಟೀಸ್‌ಗಳನ್ನು ಕಳುಹಿಸಿದ್ದಾರೆ. ಬಹುಶಃ ಬರಗಾಲ ಬಂದು ರೈತರಿಗೆ ಈ ವರ್ಷ ಬೆಳೆಯಾಗದೆ ಸಾಲವನ್ನು ಮರುಪಾವತಿ ಮಾಡುವುದಕ್ಕಾಗದಿರುವಂತಹ ಪರಿಸ್ಥಿತಿ ನಿರ್ಮಾಣವಾದರೆ ಅವರ ಬಗ್ಗೆ ಕ್ರಮಗಳನ್ನು ಕೈಗೊಂಡು ಸೂಕ್ತವಾಗಿರುವಂತಹ ಆದೇಶವನ್ನು ಕೊಡುತ್ತೇನೆ.